# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –175 ಅಶೋಕ ಸ್ಥಂಭ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಅಶೋಕ ಸ್ಥಂಭ ವಾರ್ಡ್–175 ರಲ್ಲಿ ವಾರ್ಡ್ ಸಭೆಯನ್ನು ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆಮೇರೆಗೆ ದಿನಾಂಕ:21/01/2023 ಶನಿವಾರದಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ.
2. ಶ್ರೀ. ಧರ್ಮಸಿಂಗ್ ಚತ್ರುನಾಯಕ್ ವಾರ್ಡ್ ಇಂಜಿನಿಯರ್.
3. ಶ್ರೀ. ರವಿಂದ್ರ ಹಿಜೇರಿ, ಹಿರಿಯ ಆರೋಗ್ಯ ಪರಿವೀಕ್ಷಕರು.
4. ಶ್ರೀ. ಜಿ. ಮೂರ್ತಿ, ಸಹಾಯಕ ಇಂಜಿನಿಯರ್ (ವಿದ್ಯುತ್–ದಕ್ಷಿಣ).
5. ಶ್ರೀ. ರಾಘವೇಂದ್ರ ಎನ್. ಗ.ಯಂ.ನಿ (ಸ.ಕಾ.ನಿ.ಅ ಕಛೇರಿ)
6. ಶ್ರೀ. ಸಿದ್ದರಾಮಯ್ಯ, ಎ.ಎಸ್.ಐ ಸಿದ್ದಾಪುರ ಪೊಲೀಸ್ ಠಾಣೆ.
7. ವಾರ್ಡ್ ಸಂಖ್ಯೆ 175ರ ಸ್ಥಳೀಯರಾದ ಶ್ರೀ. ಸೋಮಶೇಖರ್ ಕೆ.ಸಿ, ಶ್ರೀ. ಲಕ್ಷ್ಮೀಶ್ ಕೆ.ಎಂ, ಶ್ರೀ.ಶ್ರೀನಿವಾಸ್ ಜಿ, ಶ್ರೀ. ಮಂಜುನಾಥ್, ಶ್ರೀ. ರಂಗನಾಥ್ & ಶ್ರೀ. ರಾಧಾಕೃಷ್ಣ.

*********

1. ವಾರ್ಡ್–175(153) ಅಶೋಕ ಸ್ಥಂಭ ವಾರ್ಡ್‌ನ ಸಾರ್ವಜನಿಕ ಕುಂದು ಕೊರತೆಗಳ ಬಗ್ಗೆ ಚರ್ಚಿಸುವ ಸಂಬಂಧ ದಿನಾಂಕ:21/01/2023 ಶನಿವಾರದಂದು ಬೆಳಗ್ಗೆ 11.00 ಗಂಟೆಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.

2. ವಾರ್ಡಿನ ಸ್ಥಳೀಯರಾದ ಶ್ರೀ. ರಾಧಾಕೃಷ್ಣ ರವರು ಮಾತನಾಡಿ ಜಯನಗರ 1ನೇ ಬ್ಲಾಕ್ ರಾಮ ಮಂದಿರ ಹಾಗೂ ಇನ್ನಿತರೆ ಸ್ಥಳಗಳಲ್ಲಿ ಬೆಸ್ಕಾಂ ಇಲಾಖೆಯಿಂದ ಹೊಸದಾಗಿ ಪೋಲ್‌ಗಳನ್ನು ಅಳವಡಿಸಿರುತ್ತಾರೆ. ಆದರೆ ಹಾಲಿ ಇದ್ದ ಪೋಲ್‌ಗಳ ಹಳೆಯ ಕಟ್ಟೆಯನ್ನು ತೆರವುಗೊಳಿಸದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು. ಆದುದರಿಂದ ಸದರಿ ಹಳೆಯ ಕಟ್ಟೆಯಲ್ಲು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿದರು.



Scanned with CamScanner

3. ವಾರ್ಡಿನ ಸ್ಥಳೀಯರಾದ ಶ್ರೀ. ರಾಧಾಕೃಷ್ಣ ರವರು ಮಾತನಾಡಿ ಅಪೋಲೋ ಆಸ್ಪತ್ರೆ ಎದುರುಗಡೆ ಶಾಶ್ವತವಾದ ಡಿವೈಡರ್ ಅನ್ನು ಅಳವಡಿಸಲು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತಿಳಿಸಿದರು.

4. ವಾರ್ಡಿನ ಸ್ಥಳೀಯರಾದ ಶ್ರೀ. ಕೆ.ಸಿ. ಶೋಮಶೇಖರ್ ರವರು ಮಾತನಾಡಿ ಜಯನಗರ 2ನೇ ಬ್ಲಾಕ್ 9ನೇ ಮುಖ್ಯರಸ್ತೆಯ ಪಾಲಿಕೆ ಉದ್ಯಾನವನದ ಮುಂಭಾಗದಲ್ಲಿರುವ ಇ-ಟಾಂಯ್ಲೆಟ್ ಕೆಲಸ ನಿರ್ವಹಿಸದೇ ಕೆಟ್ಟು ನಿಂತಿದ್ದು, ಸಾರ್ವಜನಿಕರ ಉಪಯೋಗಕ್ಕೆ ಬಾರದೆ ಅನಾನುಕೂಲ ವಾಗುತ್ತಿದೆ ಎಂದು ತಿಳಿಸಿದರು. ಹಾಗೂ ಆದಷ್ಟು ಬೇಗ ಸದರಿ ಇ-ಟಾಂಯ್ಲೆಟ್‌ಗಳನ್ನು ದುರಸ್ಥಿಗೊಳಿಸುವಂತೆ ಹಾಗೂ ಒಂದು ವೇಳೆ ದುರಸ್ಥಿಯಾಗದೇ ಇದ್ದಲ್ಲಿ ಅವುಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತಿಳಿಸಿದರು.

5. ವಾರ್ಡಿನ ಸ್ಥಳೀಯರಾದ ಶ್ರೀ. ಮಂಜುನಾಥ್ ರವರು ಮಾತನಾಡಿ ಜಯನಗರ 1ನೇ ಬ್ಲಾಕ್ ಹಾಗೂ ಕನಕನಪಾಳ್ಯ ಸುತ್ತಮುತಲಲ್ಲಿ ಸೊಳ್ಳೆಗಳಿಂದ ತುಂಬಾ ತೊಂದರೆಯಾಗುತ್ತಿದ್ದು, ಔಷದಿಯನ್ನು ಸಿಂಪಡಿಸಲು ಕೇಳಿಕೊಂಡರು.

6. ವಾರ್ಡಿನ ಸ್ಥಳೀಯರಾದ ಶ್ರೀ. ಲಕ್ಷ್ಮೀಶ ರವರು ಮಾತನಾಡಿ ಮೈಯಾ ಆಸ್ಪತ್ರೆಯ ಎದುರುಗಡೆ ಚಂದ್ರಸಾಗರ ಕಲ್ಯಾಣ ಮಂಟಪದ ಪಕ್ಕ ಈ ಹಿಂದೆ ಬಸ್ ತಂಗುದಾಣ ಇದ್ದುದನ್ನು ತೆರವುಗೊಳಿಸಿದ್ದು, ಸದರಿ ತಂಗುದಾಣವನ್ನು ಮರುನಿರ್ಮಾಣ ಮಾಡಲು ಕೇಳಿಕೊಂಡರು.

ಮೇಲಿನ ಎಲ್ಲಾ ಅಂಶಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಹಾಜರಿದ್ದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ತಿಳಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಗೈರುಹಾಜರಾಗಿರುವ ಇತರೆ ಇಲಾಖೆಯವರು ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ತಿಳಿಸುತ್ತಾ ಸಭೆ ಮುಕ್ತಾಯಗೊಳಿಸಲಾಯಿತು.

(ಧರ್ಮಸಿಂಗ್ [illegible]ನಾಯಕ್)
ಕಾರ್ಯದರ್ಶಿ
ವಾರ್ಡ್-175 ಅಶೋಕ ಸ್ತಂಭ

(ವರಲಕ್ಷ್ಮಮ್ಮ ಎಲ್)
ನೋಡಲ್ ಅಧಿಕಾರಿ
ವಾರ್ಡ್-175 ಅಶೋಕ ಸ್ತಂಭ



Scanned with CamScanner